DTE-CDCOLRDC/15/2024-JD CDC-DEPT TECH EDUCATION

1/731816/2024

ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ಡಿಟಿಇ-15ಎಲ್‌ಆರ್‌ಡಿಸಿ (E-1630436)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 30/12/2024

ಇವರಿಗೆ,

ಪ್ರಾಂಶುಪಾಲರು,
ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್,
ಮಂಗಳೂರು.

ಮಾನ್ಯರೆ,

ವಿಷಯ: ಕ್ರೀಡಾಕೂಟವನ್ನು ಆಯೋಜಿಸಲು ನೀಡಲಾಗುವ ಅನುದಾನವನ್ನು ನಿಯಮಾನುಸಾರ ಖರ್ಚು ಮಾಡುವ ಬಗ್ಗೆ.
ಉಲ್ಲೇಖ: ಈ ಕಛೇರಿ ಪತ್ರ ಸಂಖ್ಯೆ:ಡಿಟಿಇ-13ಎಲ್‌ಆರ್‌ಡಿಸಿ(e-1248319) ದಿನಾಂಕ:19/12/2024.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25 ನೇ ಸಾಲಿನ "45 ನೇ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ"ವನ್ನು ಆಯೋಜಿಸಲು ನೀಡಲಾಗುವ ಅನುದಾನವನ್ನು ನಿಯಮಾನುಸಾರ ಈ ಕೆಳಕಂಡ ಉದ್ದೇಶಗಳಿಗೆ ಖರ್ಚು ಮಾಡಲು ಸೂಚಿಸಲಾಗಿದೆ.

1. ರಾಜ್ಯಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು, ಸಿಬ್ಬಂದಿಯವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ.
2. ರಾಜ್ಯಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು, ಸಿಬ್ಬಂದಿಯವರಿಗೆ ಉಪಹಾರ ಮತ್ತು ಊಟದ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ.
3. ಕ್ರೀಡಾ ವಿಜೇತರಿಗೆ ವಿತರಿಸಲು ಬಹುಮಾನಗಳನ್ನು ಖರೀದಿಸಲು ಮತ್ತು ಪ್ರಶಸ್ತಿ ಪತ್ರಗಳನ್ನು ಮುದ್ರಿಸಲು ತಗಲುವ ವೆಚ್ಚವನ್ನು ಭರಿಸಲು.
4. ಕ್ರೀಡಾಕೂಟದಲ್ಲಿ ಭಾಗವಹಿಸಲು ಬರುವ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳನ್ನು ವಸತಿ ನಿಲಯಕ್ಕೆ ಮತ್ತು ಕ್ರೀಡಾಂಗಣಕ್ಕೆ ಪ್ರಯಾಣ ಸೌಕರ್ಯ ಕಲ್ಪಿಸುವ ಸಂಬಂಧ ವಾಹನ ವ್ಯವಸ್ಥೆಗಾಗಿ ತಗಲುವ ಸಾರಿಗೆ ವೆಚ್ಚವನ್ನು ಭರಿಸಲು.
5. ಕ್ರೀಡಾಕೂಟವನ್ನು ಯಶಸ್ವಿಗೊಳಿಸಲು ಆಮಂತ್ರಣ ಪತ್ರ, ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಕ್ಕೆ ಮಾಡಬೇಕಾಗಿರುವ ಜಾಹೀರಾತು, ಧ್ವನಿವರ್ಧಕದ ವ್ಯವಸ್ಥೆ, ಚಪ್ಪರ, ಆಸನದ ವ್ಯವಸ್ಥೆ, ನೀರಿನ ವ್ಯವಸ್ಥೆ ಮತ್ತು ಇತರೆ ವ್ಯವಸ್ಥೆಗಾಗಿ ತಗಲುವ ವೆಚ್ಚವನ್ನು ಭರಿಸುವುದು.
6. ಸಮಾರಂಭದ ಯಶಸ್ಸಿಗಾಗಿ ಅವಶ್ಯಕವಾದ ಹಾಗೂ ಕ್ರೀಡಾಕೂಟವನ್ನು ಆಯೋಜಿಸುವ ಸಂಸ್ಥೆಯ ಕ್ರೀಡಾಕೂಟದ ಸಮಿತಿಯು ಅನುಮೋದಿಸುವ ಇತರೆ ತುರ್ತು ವೆಚ್ಚಗಳನ್ನು ಭರಿಸುವುದು.

ಜಂಟಿ ನಿರ್ದೇಶಕರು (ಸಿಡಿಸಿ)
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು